ಕರ್ನಾಟಕ ಸರ್ಕಾರ

ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಬಿಟಿಇ 08 ಇಪಿಎಸ್ 2023

ಆಯುಕ್ತರವರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು-560 001.
ದೂ.ಸಂ: 080-22200777
E-mail: dte.commissioner@gmail.com

ದಿನಾಂಕ:22-12-2023.

## ಸುತ್ತೋಲೆ

ವಿಷಯ: ತಾಂತ್ರಿಕ ಶಿಕ್ಷಣ ಇಲಾಖೆ - ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿಯ ಡಿಸೆಂಬರ್ 2023 ರ ಡಿಪ್ಲೋಮಾ ಸೆಮಿಸ್ಟರ್ ಥಿಯರಿ ಪರೀಕ್ಷೆಗಳ ಸಂಬಂಧ ವಿಚಕ್ಷಣಾಧಿಕಾರಿಗಳಿಗೆ " ಹಾಜರಾತಿ ಪ್ರಮಾಣ ಪತ್ರ " ನೀಡುವ ಬಗ್ಗೆ.

ಉಲ್ಲೇಖ: ಈ ಕಛೇರಿ ಜ್ಞಾಪನ ಸಂಖ್ಯೆ: ಬಿಟಿಇ 08 ಇಪಿಎಸ್ 2023, ದಿ:20-12-2023.

*-*-*-*-*

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ತಾಂತ್ರಿಕ ಪರೀಕ್ಷಾ ಮಂಡಳಿಯ 2023-24ನೇ ಶೈಕ್ಷಣಿಕ ಸಾಲಿನ ಡಿಸೆಂಬರ್ 2023ರ ಡಿಪ್ಲೋಮಾ ಸೆಮಿಸ್ಟರ್ ಪರೀಕ್ಷಾ ಕೇಂದ್ರಗಳಿಗೆ ಅನಿರೀಕ್ಷಿತ ಭೇಟಿ ನೀಡಿ ಪರೀಕ್ಷೆಗಳು ಶಿಸ್ತಾಗಿ ಮತ್ತು ವ್ಯವಸ್ಥಿತವಾಗಿ ನಡೆಯುವಂತೆ ಹಾಗೂ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳಿಂದ / ಉಪನ್ಯಾಸಕ / ಬೋಧಕರಿಂದ ನಡೆಯಬಹುದಾದ ದುರಾಚಾರ (ಮಾಲ್ ಪ್ರಾಕ್ಟೀಸ್) ಪ್ರಕರಣಗಳನ್ನು ಪತ್ತೆ ಹಚ್ಚಲು ಜಿಲ್ಲಾವಾರು ವಿಚಕ್ಷಣಾಧಿಕಾರಿಗಳನ್ನು ರಚಿಸಿ ಮತ್ತು ಉಲ್ಲೇಖಿತ ಜ್ಞಾಪನದನ್ವಯ ಆದೇಶ ಹೊರಡಿಸಲಾಗಿತ್ತು.

ಮುಂದುವರೆದು, ಸಂಬಂಧಪಟ್ಟ ಸರ್ಕಾರಿ ಪಾಲಿಟೆಕ್ನಿಕ್ ಗಳ ಪ್ರಿನ್ಸಿಪಾಲರುಗಳು ಅಗತ್ಯಕ್ಕನುಗುಣವಾಗಿ ಹಾಗೂ ಆದ್ಯತೆ ಮೇರೆಗೆ ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿನ ಪರೀಕ್ಷಾ ಕೇಂದ್ರಗಳಿಗೆ ವಿಚಕ್ಷಣಾಧಿಕಾರಿಗಳನ್ನು ಭೇಟಿ ನೀಡಲು ಸೂಚಿಸಿ, ಭೇಟಿ ನೀಡಿದ ಪರೀಕ್ಷಾ ಕೇಂದ್ರಗಳ ವರದಿಯನ್ನು ನಿಗದಿತ ನಮೂನೆಯಲ್ಲಿ ಪಡೆಯುವುದು. ಎಲ್ಲಾ ಪರೀಕ್ಷೆಗಳು ಮುಕ್ತಾಯವಾದ (30-12-2023 ರ) ನಂತರ ಪ್ರತಿಯೊಬ್ಬ ವಿಚಕ್ಷಣಾಧಿಕಾರಿಗಳು ಭೇಟಿ ನೀಡಿದ ಪರೀಕ್ಷಾ ಕೇಂದ್ರಗಳ ವರದಿಗಳನ್ನು ಕ್ರೋಢೀಕರಿಸಿ, ಭೇಟಿ ನೀಡಿರುವ ಬಗ್ಗೆ ಖಾತರಿಪಡಿಸಿಕೊಂಡು ಹಾಜರಾತಿ ಪ್ರಮಾಣ ಪತ್ರಗಳನ್ನು ದ್ವಿಪ್ರತಿಯಲ್ಲಿ ನೀಡುವುದು.

ಹಾಜರಾತಿ ಪ್ರಮಾಣ ಪತ್ರ/ಗಳ ಒಂದು ಪ್ರತಿಯನ್ನು ಸಂಸ್ಥೆಯ ರಕ್ಷಾ ಕಡತದಲ್ಲಿ ಸಂರಕ್ಷಿಸುವುದು ನಂತರ ವಿಚಕ್ಷಣಾಧಿಕಾರಿಗಳ ವರದಿಗಳನ್ನು ಕ್ರೋಢಿಕರಿಸಿ ಪ್ರಯಾಣ ಭತ್ಯೆ ಬಿಲ್ಲುಗಳೊಂದಿಗೆ ಸಂಬಂಧಪಟ್ಟ ಹಾಜರಾತಿ ಪ್ರಮಾಣ ಪತ್ರಗಳನ್ನು ಲಗತ್ತಿಸಿ ಕಾರ್ಯದರ್ಶಿಗಳು, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು ಇವರಿಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಲು ಸೂಚಿಸಲಾಗಿದೆ.

ಕಾರ್ಯದರ್ಶಿ

ಇವರಿಗೆ,

1. ಸಂಬಂಧಪಟ್ಟ ಸರ್ಕಾರಿ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ - ಅಗತ್ಯ ಕ್ರಮಕ್ಕಾಗಿ
2. ಮೇಲ್ಕಂಡ ವಿಚಕ್ಷಣಾ ಅಧಿಕಾರಿಗಳಿಗೆ - ಸಂಬಂಧಪಟ್ಟ ಪ್ರಿನ್ಸಿಪಾಲರ ಮುಖಾಂತರ

ಪ್ರತಿಗಳು:

1. ಲೆಕ್ಕಾಧಿಕಾರಿಗಳು(ಪರೀಕ್ಷೆ), ರಿಜಿಸ್ಟ್ರಾರ್(ಪರೀಕ್ಷೆ), ಅಧೀಕ್ಷಕರು(ಬಿಲ್ಸ್ ಪರೀಕ್ಷೆ)
2. ಇಬಿಎಲ್(1) ಮತ್ತು (2) ಹಾಗೂ ಇಸಿಎಸ್ 1, 2, 3 ವಿಭಾಗಗಳಿಗೆ.
3. ವಿಚಕ್ಷಣಾ ಅಧಿಕಾರಿ ಕಾರ್ಯಕ್ಕೆ ಸಂಬಂಧಪಟ್ಟ ಸಂಸ್ಥೆಯ ಪ್ರಿನ್ಸಿಪಾಲರು ಕೊಠಡಿ ಮೇಲ್ವಿಚಾರಕರ ಕೆಲಸದಿಂದ ಆದ್ಯತೆ ಮೇರೆಗೆ ವಿನಾಯಿತಿ ನೀಡಿ ವಿಚಕ್ಷಣಾ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸಲು ಅನುವು ಮಾಡಿಕೊಡಲು ಸೂಚಿಸಲಾಗಿದೆ. ಅಗತ್ಯವಿದ್ದಲ್ಲಿ ಮಾತ್ರ ಕೊಠಡಿ ಮೇಲ್ವಿಚಾರಣಾ ಕೆಲಸಕ್ಕೆ ವಿಚಕ್ಷಣಾ ಅಧಿಕಾರಿಯವನ್ನು ನೇಮಿಸುವುದು.